

# ಅಭಿನಯ ಆಕಸ್ಮಿಕ ಹಾದಿ

## ರಶ್ಮಿ ಜೈರಾಜ್

### ಉದಯದ 'ದೇವಯಾನಿ'ಯ ದೇವಯಾನಿ

**❖ ನಿಮ್ಮದೇನು ಪೌರಾಣಿಕ ಪಾತ್ರವೇ?**

ಅಲ್ಲಲ್ಲ. ಸಾಮಾಜಿಕ ಹಿನ್ನೆಲೆಯ ಧಾರಾವಾಹಿ. ಕಥಾನಾಯಕಿಯಾಗಿ ನಾನು ಕಾಣಿಸಿಕೊಂಡಿದ್ದೇನೆ. ಅತ್ಯಂತ ಮುಗ್ಧ ಸ್ವಭಾವದ ಹೆಣ್ಣಿನ ಪಾತ್ರ. ಆಕೆಗೆ ಯಾರೇ ಕೆಟ್ಟದ್ದನ್ನು ಬಯಸಿದರೂ ಆಕೆ ಮಾತ್ರ ಎಲ್ಲರಿಗೂ ಒಳಿತನ್ನೇ ಬಯಸುತ್ತಾಳೆ. ಪಾಸಿಟಿವ್ ಗುಣದವಳು. ಅಂತಹ ಒಳ್ಳೆಯ ಹುಡುಗಿಗೆ ನಾನಾ ಕಡೆಗಳಿಂದ ತೊಂದರೆಗಳು ಎದುರಾಗುತ್ತವೆ. ಬೇರೆಯವರ ಕಿರಿಕಿರಿಗೆ ತಲೆಕೆಡಿಸಿಕೊಳ್ಳದ ಆಕೆಯ ಮೇಲೆ ಕೆಲವರಲ್ಲಿ ಸಹಾನುಭೂತಿ ಹುಟ್ಟಿದ್ದರೆ, ವಿಘ್ನ ಸಂತೋಷಿಗಳು ಮತ್ತಷ್ಟು ಕಾಡಿಸಲು ಕುತಂತ್ರ ಹೆಣೆಯುತ್ತಾರೆ.

**❖ ಅಭಿನಯದ ಆರಂಭದ ದಿನಗಳು ಹೇಗಿದ್ದವು?**

ಎಂಜಿನಿಯರಿಂಗ್ ಓದುತ್ತಿದ್ದ ನನಗೆ ಅಭಿನಯ ಆಕಸ್ಮಿಕ ತಿರುವು. ನಟಿಯಾಗಬೇಕು ಎನ್ನುವ ಭಾವವೇ ನನಗೆ ಇರಲಿಲ್ಲ. 'ಜೊತೆ ಜೊತೆಯಲಿ' ಧಾರಾವಾಹಿಯಲ್ಲಿ ಪುಟ್ಟ ಪಾತ್ರದ ಮೂಲಕ ಪ್ರವೇಶ ಮಾಡಿದೆ. ಏನೋ ಒಂದು ಪ್ರಯೋಗ ಎಂದು ಕಾಲಿಟ್ಟ ನಾನು ಇದನ್ನೇ ವೃತ್ತಿಯಾಗಿ ಸ್ವೀಕರಿಸುತ್ತೇನೆ ಎನ್ನುವುದೇ ಗೊತ್ತಿರಲಿಲ್ಲ. ಆರಂಭದ ದಿನಗಳಲ್ಲಿ ಏಕೆ ನಾನು ಇಲ್ಲಿಗೆ ಬಂದೆ ಎನ್ನುವ ಪ್ರಶ್ನೆ ಸ್ವತಃ ನನಗೇ ಕಾಡಿದೆ.

'ಮದುಮಗಳು' 'ಜಸ್ಟ್ ಮಾತ್ ಮಾತಲ್ಲೆ' ನಾಯಕಿಯಾಗಿ ನಟಿಸಿದೆ. ಅದರ ಖುಷಿ ನನ್ನನ್ನು ಮತ್ತೆ ಬೇರೆ ಯಾವ ಯೋಚನೆಯೂ ಇಲ್ಲದಂತೆ ಮಾಡಿತು. ತಮಿಳು ಧಾರಾವಾಹಿಗಳಲ್ಲಿಯೂ ನಟಿಸುವ ಅವಕಾಶ ಸಿಕ್ಕಿದೆ. ಸದ್ಯ ಬಿಡುವಿಲ್ಲದಂತೆ ಕಿರುತೆರೆಯಲ್ಲಿ ತೊಡಗಿದ್ದೇನೆ.

**❖ ನಟಿಯಾಗಿ ಯಶಸ್ವಿಯಾಗಬೇಕು ಎಂದರೆ ಏನು ಮಾಡಬೇಕು?**

ನನ್ನ ಪ್ರಕಾರ ಈ ಬಗ್ಗೆ ಒಂದು ಪ್ಯಾಶನ್ ಇರಬೇಕು. ಆಡಿಷನ್ ಅಟೆಂಡ್ ಮಾಡ್ತಾ ಇರಬೇಕು. ಪಾತ್ರವನ್ನು ಮೊದಲು ತಿಳಿದು ನಂತರ ಮುಂದುವರಿಯಬೇಕು. ಪಾತ್ರ ನಿರ್ವಹಿಸುವವರಿಗೂ ಕಥೆ ಇಷ್ಟ ಆಗಬೇಕು. ಎಲ್ಲಾ ಧಾರಾವಾಹಿ ನಿಂತಿರುವುದೇ ಕಥೆಯ ಮೇಲೆ. ಅದನ್ನು ಅರ್ಥ ಮಾಡಿಕೊಳ್ಳುವುದು ನಮ್ಮ ಕೈಯಲ್ಲಿರುತ್ತದೆ. ಕಥೆ ಹಿಡಿಸಿ, ಪಾತ್ರ ಹೊಂದಿಕೆಯಾಗುತ್ತದೆ ಎನ್ನುವ ಭರವಸೆ ಮೂಡಿದರೆ ಖಂಡಿತ ಯಶಸ್ವಿಯಾಗಬಹುದು.

**❖ ಸಿನಿಮಾದಲ್ಲಿ ನಟಿಸುವ ಬಗ್ಗೆ ಏನಂದುಕೊಂಡಿದ್ದೀರಿ?**

ಸಿನಿಮಾದಲ್ಲಿಯೂ ನಟಿಸಬೇಕು. ಇಲ್ಲಿಯೂ ನಟಿಸಬೇಕು. ಅಭಿನಯದ ವಿಷಯದಲ್ಲಿ ಅಂತಹ ಅಂತರವೇನೂ ಇಲ್ಲ. ಖಂಡಿತ ಮುದೊಂದು ದಿನ ನಟಿಸಬಹುದು. ಈಗಾಗಲೇ ಕೆಲವೊಂದು ಅವಕಾಶ ಬಂದಿದ್ದವು. ನಾನು ಒಪ್ಪಿಲ್ಲ. ಏಕೆಂದರೆ ನನಗೆ ಆಹ್ವಾನ ನೀಡಿದವರು ಪರಿಚಯ ಇರಲಿಲ್ಲ. ಎರಡನೆಯದಾಗಿ ಸಿನಿಮಾ ಬಗ್ಗೆ ಆಳವಾದ ತಿಳಿವಳಿಕೆ ನನ್ನಲ್ಲಿ ಇನ್ನೂ ಬಂದಿಲ್ಲ. ಮುಂದೆ ಅಂತಹ ಸಂದರ್ಭ ಬಂದಾಗ ಅಲ್ಲಿಯೂ ನಟಿಸುತ್ತೇನೆ. ಅಷ್ಟು ಮಾತ್ರವಲ್ಲ, ಮುಂದೆ ತಾಂತ್ರಿಕವಾಗಿ ಕೂಡ ಆಸಕ್ತಿ ಮತ್ತು ಜ್ಞಾನ ಬೆಳೆದರೆ ಆ ನಿಟ್ಟಿನಲ್ಲಿಯೂ ಯೋಚಿಸಬಹುದು. ಮುಂದಿನದನ್ನು ಈಗಲೇ ಹೇಗೆ ಊಹೆ ಮಾಡುವುದು. ನಟಿಯಾಗುವ ಕನಸಿಲ್ಲದೆ ನಟಿಯಾಗಿದ್ದೇನೆ. ಮುಂದೆ ಕಾಲವೇ ಎಲ್ಲದನ್ನೂ ನಿರ್ಧರಿಸುತ್ತದೆ.

**❖ ಈ ಪಾತ್ರ ಏಕೆ ಇಷ್ಟ ಆಯ್ತು?**

ಸುಂದರೇಶ್ ಅವರ ತಂಡದಲ್ಲಿ ಮೊದಲೇ ಕೆಲಸ ಮಾಡಿದ್ದೆ. ಅವರು ಈ ಪಾತ್ರವನ್ನು ನಾನು ನಿಭಾಯಿಸಬಲ್ಲೆ ಎನ್ನುವ ವಿಶ್ವಾಸದಿಂದ ನೀಡಿದ್ದಾರೆ. ತಮಿಳಿನಲ್ಲಿ ಬ್ಯುಸಿಯಾಗಿದ್ದ ನನಗೆ ಮತ್ತೆ ಕನ್ನಡದಲ್ಲಿ ನಟಿಸುವ ಅವಕಾಶ ಒದಗಿ ಬಂದಿದ್ದ ಸಂತೋಷವೂ ಕಾರಣ.

■ ರಾಘವೇಂದ್ರ